# ಪೀಠಿಕೆ

# ಕ್ರಿಸ್ತನು ತನ್ನ ಸಭೆಯನ್ನು ಹೇಗೆ ಸ್ಥಾಪಿಸಿದನು?

ಕ್ರಿಸ್ತನು ಭೂಲೋಕದ ಜೀವಿತದ ವಿಶಿಷ್ಟವಾದ ಗುಣದಲ್ಲಿ ಒಂದು ಆತನು ಏನನ್ನೂ ಸ್ವಂತಕ್ಕಾಗಿ ಆಯ್ಕೆ ಮಾಡಿಕೊಳ್ಳದೇ ಇರುವಂಥದ್ದು. ಹೊಸ ಒಡಂಬಡಿಕೆಯಲ್ಲಿ ಆತನು ಒಂದು ಮನೆಕಟ್ಟಿದ್ದನ್ನು, ಯಾವುದೇ ರೀತಿಯ ಕಟ್ಟಡವನ್ನು ದುರಸ್ತಿ ಮಾಡಿದ್ದನ್ನು ಇಲ್ಲವೇ ಭೂಮಿ ಕೊಂಡು ಕೊಂಡದ್ದನ್ನು ನಾವು ಎಂದೂ ಓದಿಲ್ಲ. ಸುವಾರ್ತೆಗಳು ಆತನು ಯಾವುದನ್ನಾದರೂ - ಬಟ್ಟೆ, ಸಲಕರಣೆಗಳು, ಇಲ್ಲವೇ ಆಹಾರವನ್ನಾದರೂ ಕೊಂಡುಕೊಳ್ಳುವದರ ಬಗ್ಗೆ ಉಲ್ಲೇಖಿಸುವುದಿಲ್ಲ. ಆತನು ಭೂ ಲೋಕದಲ್ಲಿದ್ದಾಗ, ಮತ್ತು ಒಂದು ರೀತಿಯಲ್ಲಿ, ಅದರ ನಾಗರಿಕನಾಗಿದ್ದಾಗ, ಆತನು ಎಂದೂ ಮನೆಯಲ್ಲಿದ್ದಂತೆಯೇ ಇರಲಿಲ್ಲ. ಆತನು ಲೋಕದಲ್ಲಿ ಇದ್ದನು, ಆದರೆ ಜಗತ್ತು ಆತನಲ್ಲಿ ಇರಲಿಲ್ಲ; ಜಗತ್ತಿನ ಭಾಗವಾಗಿ ಆತನು ಜೀವಿಸಿದನು, ಆದರೆ ಅದು ಆತನಲ್ಲಿ ಜೀವಿಸಲು ಆತನು ಎಂದೂ ಬಿಡಲಿಲ್ಲ. ಆತನು ಇಲ್ಲಿ ಜೀವಿಸಿದಾಗ, ವಿದೇಶ ದಲ್ಲಿ ಅಪರಿಚಿತನಾಗಿದ್ದನು, ಇನ್ನೊಂದು ಜಗತ್ತಿನೊಂದಿಗೆ ಮೆಚ್ಚಿಕೆಗಳೂ ಜೀವವೂ ಒಳಗೊಂಡಿದ್ದ ಯಾತ್ರಿಕನಾಗಿದ್ದನು.

"ನನ್ನ" ಮತ್ತು "ನನ್ನದು" ಎಂಬ ಒಡೆತನದ ಸರ್ವನಾಮಗಳನ್ನು ಕ್ರಿಸ್ತನು ಉಪಯೋಗಿಸಿದ್ದು "ನನ್ನ ಶಿಷ್ಯರು" (ಯೋಹಾನ 8:31), "ನನ್ನ ತಂದೆ" (ಮತ್ತಾಯ 26:39), "ನನ್ನ ದೇಹ" (ಮತ್ತಾಯ 26:26), "ನನ್ನ ರಕ್ತ" (ಮತ್ತಾಯ 26:28), "ನನ್ನ ವಾಕ್ಯಗಳು" (ಲೂಕ 6:47), ಮತ್ತು "ನನ್ನ ಸಭೆ" ( ಮತ್ತಾಯ 16:18) ಎಂದು ಆತನು ಮಾತಾಡಿದನು. ಆತನ ದೇಹ, ರಕ್ತ ಮತ್ತು ವಾಕ್ಯಗಳು ಎಂಬ ಆತನ ಉಲ್ಲೇ ಖಗಳೂ ಸಹ ಕೇವಲ ವೈಯಕ್ತಿಕ ಬಯಕೆಯ ಕುರುಹುಗಳಿಲ್ಲದೇ ಆತ್ಮಿಕ ಹಿನ್ನಲೆಯಲ್ಲಿ ಇರುತ್ತವೆ.

ಸುವಾರ್ತೆಗಳ ಪ್ರಕಾರವಾಗಿ, ಕ್ರಿಸ್ತನು ತನ್ನ ಭೂಲೋಕದ ಸೇವೆಯ ಒಂದು ಸ್ಥಿರ ವಾದ ವಿಸ್ತರಣೆಯಾಗಿ ಒಂದು ವೈಯಕ್ತಿಕ ಸ್ವಾಸ್ಥ್ಯವನ್ನು, ತನ್ನ ಸಭೆಯನ್ನು - ಕಾಲೇಜನ್ನು, ಪ್ರಾಪಂಚಿಕ ಮನೆಯನ್ನು ಅಥವಾ ಅದೃಷ್ಟವನ್ನು ಅಲ್ಲ, ಬಿಟ್ಟು ಹೋಗಲು ಹುಡುಕಿದನು (ಮತ್ತಾಯ 16:18). ದೇವರ ರಾಜ್ಯವು ಬರುವದರ ಬಗ್ಗೆ ಪ್ರಸಂಗಿಸುವದರಿಂದ ಆತನು ತನ್ನ ಭೂಲೋಕದ ಸೇವೆಯನ್ನು ಪ್ರಾರಂಭಿಸಿದನು (ಮತ್ತಾಯ 4:17), ಮತ್ತು ರಾಜ್ಯದ

ಬಗ್ಗೆ ಪ್ರಸಂಗಿಸುವದರಿಂದ ಅದನ್ನು ಮುಗಿಸಿದನು (ಅಪೊಸ್ತಲರ ಕೃತ್ಯಗಳು 1:3). ಆತನು ಸ್ಥಾಪಿಸಿದ ಸಭೆಯು ದೇವರ ರಾಜ್ಯದ ಭೂಲೋಕದ ರೂಪವಾಗಿರುವುದೆಂದು ಆತನು ಸೂಚಿಸಿದನು; ಹೀಗೆ ಈ ಅರ್ಥದಲ್ಲಿ, ದೇವರ ರಾಜ್ಯವನ್ನು ತನ್ನ ಸಭೆಯೊಂದಿಗೆ ಸಮಾಂತರ ಮಾಡಿದನು (ಮತ್ತಾಯ 16:16-18).

ಕ್ರಿಸ್ತನು ಸಭೆಯನ್ನು ಮಾತ್ರವೇ ಸ್ವಾಸ್ತ್ಯವಾಗಿ ಪಡೆಯಲು ಹುಡುಕಿದ್ದರಿಂದ, ಕ್ರಿಸ್ತನು ಅದನ್ನು ಸ್ವಾಸ್ತ್ಯವಾಗಿ ಹಿಂದೆ ಬಿಟ್ಟು ಹೋದದ್ದರಿಂದ, ಆತನಿಗೆ ಸಭೆಯು ಏಕೈಕ ಮಹತ್ವದ್ದಾಗಿದೆ ಹಾಗೂ ನಮಗೂ ಆಗಿರತಕ್ಕದ್ದು. ತಮ್ಮ ಅತೀ ಪ್ರಭಾವಶಾಲೀ ಅಪೇಕ್ಷೆಯು ಆತನ ಸಭೆಯಾಗುವುದು ಮತ್ತು ಜೀವಿಸುವುದು ಆಗಿರುವುದಾಗಿರಬೇಕು.

ಇದೆಲ್ಲದರ ಬೆಳಕಿನಲ್ಲಿ, ಒಂದು ಪ್ರಶ್ನೆಯು ನಮ್ಮಲ್ಲಿ ಪ್ರತಿಯೊಬ್ಬರಿಗೂ ಬಹಳ ಮಹತ್ವದ್ದಾಗಿದೆ: "ನಾವು ಆತನ ಸಭೆಯನ್ನು ಹೇಗೆ ಪ್ರವೇಶಿಸಬೇಕು ಮತ್ತು ಆತನ ಸಭೆಯಾಗಿ ಹೇಗೆ ಇರಬೇಕು?" ಈ ಪ್ರಶ್ನೆಯು ಪ್ರಾರಂಭದಲ್ಲಿ ಆತನ ಸಭೆಯು ಹೇಗೆ ಸ್ಥಾಪಿಸಲ್ಪಟ್ಟಿತು ಎಂಬುದನ್ನು ನಾವು ಹುಡುಕಿ ಕಂಡುಕೊಂಡರೆ ನಮಗಾಗಿ ಉತ್ತರಿಸಲ್ಪಡುವುದು. ಕ್ರಿಸ್ತನು ತನ್ನ ಸಭೆಯನ್ನು ನಿಜವಾಗಿಯೂ ಹೇಗೆ ಸ್ಥಾಪಿಸಿದನೆಂಬುದನ್ನು ನಾವು ನೋಡುವಾಗ, ಅದು ಎಲ್ಲೆಲ್ಲಿ ಅಸ್ತಿತ್ವದಲ್ಲಿರುವುದಿಲ್ಲವೋ ಆ ಸ್ಥಳಗಳಲ್ಲಿ ಇಂದು ಆತನ ಸಭೆಯನ್ನು ಸ್ಥಾಪಿಸಲು ದೃಢಪಡಿಸಲ್ಪಡುವೆವು, ಮತ್ತು ನಾವು ಎಲ್ಲೆಲ್ಲಿ ಇರುವವೋ ಅಲ್ಲಿ ನಂಬಿಗಸ್ತ ಸದಸ್ಯರಾಗಿ ಜೀವಿಸುವದನ್ನು ಅರಿತು ಕೊಳ್ಳುವೆವು.

ಆತನು ಮಾಡಿದ ವಾಗ್ದಾನವನ್ನು ಕೈಕೊಳ್ಳುವಾಗ, ಕ್ರಿಸ್ತನು ತನ್ನ ಪುನರುತ್ಥಾನದ ನಂತರದ ಪಂಚಾಶತ್ತಮ ದಿನದಂದು ತನ್ನ ಸಭೆಯನ್ನು ಸ್ಥಾಪಿಸಿದನು (ಮತ್ತಾಯ 16:18; ಅಪೊಸ್ತಲರ ಕೃತ್ಯಗಳು 2). ಆತನು ಇದನ್ನು ಹೇಗೆ ಮಾಡಿದನು?

## ಸುವಾರ್ತೆಯನ್ನು ಸಾರುವದರಿಂದ

ತನ್ನ ಸಭೆಯನ್ನು ಸ್ಥಾಪಿಸುವದರಲ್ಲಿ ಯೇಸುವಿನ ಯೋಜನೆಯ ಪ್ರಥಮ ಹೆಜ್ಜೆಯು ಸುವಾರ್ತೆಯನ್ನು ಸಾರುವುದು ಆಗಿರುತ್ತದೆ. ರಕ್ಷಣೆಯ "ಸಂತೋಷದ ತೆರೆಗಳು" ಇಲ್ಲವೇ "ಶುಭಸಮಾಚಾರವು" ದೇವರ ಕೃಪೆಯ ಮುಖಾಂತರ ಪಂಚಾಶತ್ತಮ ದಿನದಂದು ಕೂಡಿಬಂದ ಯೆಹೂದ್ಯರಿಗೆ ಬಹಿರಂಗ ಘೋಷಣೆಯಲ್ಲಿ ತಿಳಿಸಲ್ಪಟ್ಟಿತು.

ಈ ಐತಿಹಾಸಿಕ ದಿನವು ಅಪೊಸ್ತಲರ ಮೇಲೆ ಪರಿಶುದ್ಧಾತ್ಮನ ಸುರಿಸುವಿಕೆಯಿಂದ ಪ್ರಾರಂಭವಾಯಿತು. ಅಂಥ ಸುರಿಸುವಿಕೆಯನ್ನು ಕ್ರಿಸ್ತನು ವಾಗ್ದಾನ ಮಾಡಿದ್ದನು, ಮತ್ತು ಈಗ ಆ ವಾಗ್ದಾನವು ನೆರವೇರಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 1:4, 5; 2:1-4). ಅದರ ಪರಿಣಾಮವಾಗಿ, ಅಪೊಸ್ತಲರು, ಈ ಪರಿಶುದ್ಧಾತ್ಮನ ಬಾಪ್ತಿಸ್ಮದಿಂದ ಬಲಪಡಿಸಲ್ಪಟ್ಟು, ಅಲ್ಲಿ ಹಾಜರಿದ್ದವರ ಎಲ್ಲಾ ವಿವಿಧ ಭಾಷೆಗಳಲ್ಲಿ ದೇವರ ಅದ್ಭುತಕರ ವಾದ ವಾಕ್ಯಗಳನ್ನು ಮಾತಾಡಿದರು (ಅಪೊಸ್ತಲರ ಕೃತ್ಯಗಳು 2:6-8, 11). ಆಗ, ಅವನಿಗೆ ಮಾಡಲ್ಪಟ್ಟ ವಾಗ್ದಾನದ ಭಾಗಶಃ ನೆರವೇರುವಿಕೆಯಂತೆ (ಮತ್ತಾಯ 16:19), ಪೇತ್ರನು ಕ್ರಿಸ್ತನ ದೈವತ್ವದ ಬಗ್ಗೆ ವಿವರವಾದ ಪ್ರಸಂಗ ಮಾಡಿದನು (ಅಪೊಸ್ತಲರ ಕೃತ್ಯಗಳು 2:14-36, 40).

ಪೇತ್ರನು ಜನಸಮೂಹಕ್ಕೆ ಆ ದಿನ ಸಂಭವಿಸುತ್ತಿರುವಂಥದ್ದು ಯೋವೇಲನಿಂದ ಮಾಡಲ್ಪಟ್ಟ ಪ್ರವಾದನೆಯ ನೆರವೇರಿಕೆಯಾಗಿದೆ ಎಂಬುದನ್ನು ತನ್ನ ಪ್ರಸಂಗಕ್ಕೆ ಒಂದು

ಪೀಠಿಕೆಯಾಗಿ ತೋರಿಸಿದನು (ಅಪೊಸ್ತಲರ ಕೃತ್ಯಗಳು 2:15-21). ಅವನ ಪ್ರಸಂಗದ ಒಳಭಾಗವು ಕ್ರಿಸ್ತನು ತನ್ನ ಅದ್ಭುತಕಾರ್ಯಗಳಿಂದ (ಅಪೊಸ್ತಲರ ಕೃತ್ಯಗಳು 2:22), ತನ್ನ ಪುನರುತ್ಥಾನದಿಂದ (ಅಪೊಸ್ತಲರ ಕೃತ್ಯಗಳು 2:24), ಪ್ರವಾದನೆಯ ತನ್ನ ನೆರ ವೇರುವಿಕೆಯಿಂದ (ಅಪೊಸ್ತಲರ ಕೃತ್ಯಗಳು 2:25-31, 34, 35), ಸಾಕ್ಷಿಗಳಿಂದ (ಅಪೊಸ್ತಲರ ಕೃತ್ಯಗಳು 2:32), ಮತ್ತು ಪರಿಶುದ್ಧಾತ್ಮನ ಇಳಿದು ಬರುವಿಕೆಯಿಂದ (ಅಪೊಸ್ತಲರ ಕೃತ್ಯಗಳು 2:33) ಹೇಗೆ ಕರ್ತನೂ ಕ್ರಿಸ್ತನೂ ಆಗಿದ್ದಾನೆಂದು ಸಿದ್ಧ ಪಡಿಸಿದ್ದರ ಮೇಲೆ ಕೇಂದ್ರೀಕರಿಸಲ್ಪಟ್ಟಿತ್ತು. ಪೇತ್ರನು ತನ್ನ ಪ್ರಸಂಗವನ್ನು ನಿರ್ಣಾಯಕ ಮುಕ್ತಾಯದೊಂದಿಗೆ ಮುಗಿಸಿದನು, "ಆದದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ" (ಅಪೊಸ್ತಲರ ಕೃತ್ಯಗಳು 2:36).

ಪಂಚಾಶತ್ತಮದ ದಿನದಂದು, ಜಗತ್ತಿನ ಕಣ್ಣುಗಳು ಬಹುಶಃ ರೋಮ್ ಸಾಮ್ರಾಜ್ಯದ ಚಟುವಟಿಕೆಗಳ ಮೇಲೆ ಕೇಂದ್ರೀಕರಿಸಿದ್ದವು, ಆದರೆ ಪರಲೋಕದ ದೃಷ್ಟಿಯಿಂದ ಅತೀ ಪ್ರಾಮುಖ್ಯವಾದ ಘಟನೆಯು ಲೋಕದಲ್ಲಿ ಯೆರೂಸಲೇಮಿನಲ್ಲಿ ಜರುಗುತ್ತಲಿತ್ತು; ಸುವಾರ್ತೆಯು ಮೊದಲಸಲಕ್ಕೆ ಪ್ರಸಂಗಿಸಲ್ಪಟ್ಟಿತು! ಎಲ್ಲಾ ದೇವರ ಯೋಜನೆಯು, ಹಳೇ ಒಡಂಬಡಿಕೆಯ ಯುಗದ ಎಲ್ಲಾ ಪ್ರವಾದನೆಗಳು, ಕ್ರಿಸ್ತನ ಭೂಲೋಕದ ಜೀವನ ಮತ್ತು ಸೇವೆಯ ಎಲ್ಲಾ ಸಿದ್ಧತೆಯು, ದೇವರ ಕೃಪೆಯ ಸುವಾರ್ತೆಯ ಪ್ರಸಂಗದಲ್ಲಿ ಕ್ರೋಢಿ ಕರಿಸಲ್ಪಟ್ಟು ಹೊರಬಂದಿತು. ಹೊಸ ಒಡಂಬಡಿಕೆಯು ಪರಿಣಾಮಕಾರಿಯಾಗಿ ಮಾಡಲ್ಪಟ್ಟಿತು, ಮತ್ತು ಸುವಾರ್ತೆಯು ತನ್ನ ಪೂರ್ಣತೆಯಲ್ಲಿ ಒಂದು ವಾಸ್ತವಿಕತೆ ಆಯಿತು.

ಈ ಸಂದೇಶದ ಪ್ರಸಂಗಿಸುವಿಕೆಯು ಸೈತಾನನನ್ನೂ ಅವನ ರಾಯಭಾರಿಗಳನ್ನೂ ನಡುಗುವಂತೆ ಮಾಡಿದ ಮತ್ತು ಪರಲೋಕವೆಲ್ಲವೂ ಆನಂದಿಸುವಂತೆ ಮಾಡಿದ ಘಟನೆಯಾಗಿದ್ದಿರಬೇಕು. ಕ್ರಿಸ್ತನು ತನ್ನ ಸುವಾರ್ತೆಯ ಈ ಪ್ರಸಂಗಿಸುವಿಕೆಯ ಮುಖಾಂತರ ತನ್ನ ಸಭೆಯನ್ನು ಅಸ್ತಿತ್ವಕ್ಕೆ ತಂದನು; ಮತ್ತು ಈ ಸಮಯದಿಂದ ಮುಂದೆ, ಆತನ ಸಭೆಯು ಅದೇ ಸಂದೇಶದ ಪ್ರಸಂಗಿಸುವಿಕೆಯಿಂದ ಜಗತ್ತಿನ ಇತರ ಭಾಗಗಳಲ್ಲಿ ಆತನ ಸಭೆಯು ಸ್ಥಾಪಿಸಲ್ಪಡುವುದು.

ಈ ಕೆಳಗಿನ ದೃಶ್ಯವನ್ನು ಕಲ್ಪಿಸುವದರಿಂದ, ಸುವಾರ್ತೆಯ ಪ್ರಸಂಗಿಸುವಿಕೆಯ ಮಹತ್ವದ ಬಗ್ಗೆ ಯೋಚಿಸಿರಿ. ನ್ಯಾಯತೀರ್ವಿಕೆಯ ದಿನದಂದು ದೇವರ ಸಿಂಹಾಸನದ ಮುಂದೆ ಕಾಣಿಸಿಕೊಳ್ಳುವವನು ಸಂಪೂರ್ಣವಾಗಿ ಜೀವನದಲ್ಲಿ ಧಾರ್ಮಿಕತೆಯಿಲ್ಲದ ಒಬ್ಬ ಮನುಷ್ಯನು. ಅವನು ಎಂದೂ ಕರ್ತನ ಚಿತ್ತವನ್ನು ಹುಡುಕಲಿಲ್ಲ, ದೇವರನ್ನು ಎಂದೂ ಆರಾಧಿಸಲಿಲ್ಲ, ಮತ್ತು ಕ್ರೈಸ್ತ ಜೀವಿತ ಜೀವಿಸಲು ಎಂದೂ ಪ್ರಯತ್ನ ಮಾಡಲಿಲ್ಲ. ದೇವರ ಕಡೆಗೆ ತನಗೆ ಯಾವುದೇ ಹಂಗು ಇಲ್ಲವೇನೋ ಎಂಬಂತೆ ತನ್ನ ಜೀವನ ನಡಿಸಿದನು. ತನ್ನಕೆಲಸ ಮಾಡಿದನು, ಮನರಂಜನೆಯಲ್ಲಿ ತೊಡಗಿದನು, ಕುಟುಂಬವನ್ನು ಬೆಳೆಸಿದನು, ಮತ್ತು ತಾನು ವಾಸಿಸುತ್ತಿದ್ದ ಸಮಾಜದಲ್ಲಿ ಹೊಂದಿಕೊಂಡು ಹೋದನು. ಅವನು ದೇವರ ನ್ಯಾಯಾಸನದ ಮುಂದೆ ನಿಂತುಕೊಂಡಾಗ, ದೇವರು ಅವನಿಗೆ "ನೀನು ನಿನ್ನ ಜೀವಿತದ ಸಮಯದಲ್ಲಿ ಭೂಮಿಯ ಮೇಲೆ ನನ್ನ ಕಾರ್ಯದಲ್ಲಿ ನಿಜವಾಗಿಯೂ ಒಂದು ಭಿನ್ನವಾದದ್ದನ್ನು ಮಾಡಿದಿ" ಎಂದು ಹೇಳುವನು. ಆ ಮನುಷ್ಯನು ಸಂಪೂರ್ಣ ವಾಗಿ ಆಶ್ಚರ್ಯಚಕಿತನಾದನು "ಕರ್ತನೇ, ನಾನು ಧಾರ್ಮಿಕ ಮನುಷ್ಯನು ಆಗಿರಲೇ ಇಲ್ಲ ಎಂಬುದನ್ನು ಬಲ್ಲವನಾಗಿದ್ದೀ. ನನ್ನ ಜೀವನದ ಅವಧಿಯಲ್ಲಿ ಬಹಳ ಸ್ವಲ್ಪ

ಧಾರ್ಮಿಕ ಆರಾಧನೆಗಳಿಗೆ ಹೋದೆನು. ಆದರೆ ಅವುಗಳಲ್ಲಿ ಯಾವುದರಲ್ಲಿಯೂ ನಿಜವಾಗಿ ಆರಾಧಿಸಲಿಲ್ಲ. ನನ್ನ ಜೀವಿತವು ಸ್ವಾರ್ಥದಿಂದ ತುಂಬಿಕೊಂಡಿತ್ತು, ನನ್ನ ಸ್ವಂತ ಯೋಜನೆಗಳಿಂದಲೂ ಉದ್ದೇಶಗಳಿಂದಲೂ ತುಂಬಿಕೊಂಡಿತ್ತು. ಭೂಲೋಕದಲ್ಲಿ ನಿನಗಾಗಿ ಎಂದಾದರೂ ಕಾರ್ಯಮಾಡಿದ ಅರುಹು ನನಗಿಲ್ಲ. ನಿನ್ನ ಕಾರ್ಯದಲ್ಲಿ ಅಂಥಾ ಭಿನ್ನವಾದದ್ದನ್ನು ಯಾವಾಗ ಮಾಡಿದೆನು?" ಎಂದು ಅವನು ಪ್ರಶ್ನಿಸುವನು.

ದೇವರು ಆ ಮನುಷ್ಯನಿಗೆ ಹೀಗೆ ಹೇಳುವನು, "ನೀನು ವಾಸಿಸುತ್ತಿದ್ದ ಪಟ್ಟಣದಲ್ಲಿ ಪ್ರಮುಖ ಬೀದಿಯ ತಿರುವಿನಲ್ಲಿ ನಿನಗೆ ಒಂದು ಅಂಗಡಿಯಿತ್ತು. ಒಂದು ದಿನ ಒಬ್ಬ ಮನುಷ್ಯನು ನಿನ್ನ ಅಂಗಡಿಯ ಮುಂದೆ ತಡೆದು, 'ಈ ಪಟ್ಟಣದಲ್ಲಿ ಕ್ರಿಸ್ತನ ಸಭೆಯು ಎಲ್ಲಿ ಕೂಡಿಬರುತ್ತದೆ? ಎಂದು ನಿನ್ನನ್ನು ಕೇಳಿದನು. ಅವರು ಇಲ್ಲಿ ಸಮೀಪದಲ್ಲಿ ಕೂಡಿಬರುವುದು ನಿಶ್ಚಿತ ಎಂದು ಹೇಳಿ ಸಭೆಯು ಕೂಡಿಬರುವ ಸ್ಥಳದ ಬಗ್ಗೆ ಮಾರ್ಗದರ್ಶನ ಮಾಡಿದಿ.' ಆ ಮನುಷ್ಯನು ನನ್ನ ಪ್ರಸಂಗಿಗಳಲ್ಲಿ ಒಬ್ಬನಾಗಿದ್ದನು. ಆ ಪ್ರಾತಃಕಾಲ ಅವನು ಕೃಪೆಯ ನನ್ನ ಸುವಾರ್ತೆಯನ್ನು ಪ್ರಸಂಗಿಸಲು ಸಮಯಕ್ಕೆ ಸರಿಯಾಗಿ ಸಭಾಕೂಟವನ್ನು ತಲುಪಿದನು. ಅದರ ಮುಖಾಂತರ ಪ್ರಸಂಗವನ್ನು ಕೇಳಿ ಅದಕ್ಕೆ ಪ್ರತಿಕ್ರಿಯೆ ತೋರಿಸಿದವರಲ್ಲಿ ನಾನು ನನ್ನ ರಕ್ಷಣಾಕಾರ್ಯವನ್ನು ಮಾಡಿದೆನು. ಆ ಸಮಯದಲ್ಲಿ ನೀನು ಅದನ್ನು ತಿಳಿದಿರಲಿಲ್ಲ, ಆದರೆ ಜಗತ್ತಿನಲ್ಲಿ ನಡೆಯುತ್ತಿದ್ದ ಅತೀ ಉನ್ನತವಾದ ಕಾರ್ಯದಲ್ಲಿ ನೀನು ಒಂದು ಚಿಕ್ಕ ಸಂಬಂಧಿಸುವ ಕೊಂಡಿಯಾಗಿದ್ದಿ. ವಾಶಿಂಗ್ಟನ್ ಡಿ. ಸಿ, ಯಲ್ಲಿ ಇಲ್ಲವೇ ಬೇರೆ ದೇಶದ ರಾಜಧಾನಿಯಲ್ಲಿ ಸಂಭವಿಸುತ್ತಿರುವಂಥದ್ದು ಜಗತ್ತಿನಲ್ಲಿ ಅತೀ ಮಹತ್ವದ ಘಟನೆಯೆಂದು ಜಗತ್ತು ಯೋಚಿಸಿತು, ಆದರೆ ರಕ್ಷಣೆಯ ನನ್ನ ಸುವಾರ್ತೆಯು ಆ ಒಂದು ಚಿಕ್ಕ ದೇವಾಲಯದಲ್ಲಿ ಪ್ರಸಂಗಿಸಿದಾಗ ಬಹಳ ಪರಿಣಾಮಕಾರಿಯಾದ ಸಂಗತಿಯು ನಡೆಯುತ್ತಿತ್ತು. ನೀನು ಮಾರ್ಗದರ್ಶನ ಮಾಡಿದ್ದು ನನ್ನ ಒಬ್ಬ ಪ್ರಸಂಗಿಯು ಜನರ ಒಂದು ಗುಂಪಿಗೆ ಸುವಾರ್ತೆಯನ್ನು ಪ್ರಸಂಗಿಸಲು ಶಕ್ತನಾಗುವಂತೆ ಮಾಡಿತು. ನೀನು ಎಂದಾದರೂ ಮಾಡಿದ ಅತಿದೊಡ್ಡ ಸಂಗತಿಯಾಗಿದೆ."

"ಹೇಗಂದರೆ ಲೋಕವು ಜ್ಞಾನವೆನಿಸುವ ಮಾರ್ಗದಿಂದ ದೇವರನ್ನು ತಿಳುಕೊಳ್ಳದೆ ಹೋದದ್ದು ದೇವರ ಜ್ಞಾನದ ಸಂಕಲ್ಪವೆ; ಹೀಗಾದ ಮೇಲೆ ಹುಚ್ಚು ಮಾತು ಎಣಿಸಿಕೊಂಡಿರುವ ನಮ್ಮ ಪ್ರಸಂಗದಿಂದಲೇ ನಂಬುವವರನ್ನು ರಕ್ಷಿಸುವದು ದೇವರಿಗೆ ಒಳ್ಳೇದೆಂದು ತೋಚಿತು" (1 ಕೊರಿಂಥ 1:21) ಎಂದು ಪೌಲನು ಬರೆದನು. ಅಪೊಸ್ತಲರ ಕೃತ್ಯಗಳು 2ರಲ್ಲಿಯ ಪೇತ್ರನ ಪ್ರಸಂಗವು ಕ್ರಿಸ್ತನ ಕೊನೆಯ ಮರಣ ಶಾಸನವನ್ನು ಮತ್ತು ಒಡಂಬಡಿಕೆಯನ್ನು ಜಾರಿಗೆ ತಂದಿತು ಮತ್ತು ಕ್ರೈಸ್ತ ಯುಗವನ್ನು ಪ್ರಾರಂಭಿಸಿತು. ಡಾ. ಜೇಮ್ಸ್ ಡಿ. ಬೇಲ್ಸ್ ಅವರು ಅಪೊಸ್ತಲರ ಕೃತ್ಯಗಳು 2ನ್ನು "ಬೈಬಲಿನ ಚಕ್ರದ ಮಧ್ಯಭಾಗ" ಎಂದು ಕರೆದಿದ್ದಾರೆ; ಅಪೊಸ್ತಲರ ಕೃತ್ಯಗಳು 2ರ ಹಿಂದೆ, ಮೊದಲು ಇರುವಂಥದ್ದೆಲ್ಲವೂ ಮುಂದಿನದನ್ನು ನೋಡುತ್ತದೆ ಮತ್ತು ಅಪೊಸ್ತಲರ ಕೃತ್ಯಗಳು 2ನ್ನು ಹಿಂಬಾಲಿಸುವದೆಲ್ಲವೂ ಅದರ ಹಿಂದೆ ನೋಡುತ್ತದೆ. ಪ್ರಶ್ನೆಯಿಲ್ಲದೇ, ಅವರು ಸರಿಯಾಗಿ ಹೇಳಿದ್ದಾರೆ.

ಸಭೆಯ ಪ್ರಾರಂಭವು ಸುವಾರ್ತೆಯ ಪ್ರಸಂಗಿಸುವಿಕೆಯ ಸುತ್ತ ತಿರುಗಿತು. ಪಂಚಾಶತ್ತಮದ ದಿನದಂದು ಸ್ಥಾಪಿಸಲ್ಪಟ್ಟ ಸಭೆಯು ಪೇತ್ರನು ಪ್ರಸಂಗಿಸಿದ ಅದೇ ಸುವಾರ್ತೆಯನ್ನು ಪ್ರಸಂಗಿಸುವದರಿಂದ ಮಾತ್ರವೇ ಅದು ಅಸ್ತಿತ್ವದಲ್ಲಿ ಇಲ್ಲದಿರುವ ಕಡೆಗಳಲ್ಲಿ ಸ್ಥಾಪಿಸಲ್ಪಡಬಹುದು. ಒಬ್ಬ ತೋಟಗಾರನು ಇನ್ನೊಬ್ಬ ತೋಟಗಾರನು ಉಪಯೋಗಿಸಿದ ಬೀಜವನ್ನೇ ನೆಟ್ಟರೆ, ಆ ತೋಟಗಾರನು ಬೆಳೆದ ರೀತಿಯ ಹಣ್ಣನ್ನು

ಪಡೆಯ ಬಹುದು ಎಂದು ಇನ್ನೊಂದು ರೀತಿಯಲ್ಲಿ ಹೇಳಬಹುದು. ಕ್ರಿಸ್ತನು ಕಟ್ಟಿದಂಥ ಅದೇ ಸಭೆಯಿರಬೇಕೆಂದರೆ, ಪ್ರಾರಂಭದಲ್ಲಿ ಅದನ್ನು ಕಟ್ಟಿದ ಸುವಾರ್ತೆಯನ್ನೇ ಪ್ರಸಂಗಿಸುವದರಿಂದ ಕಟ್ಟಬಹುದು.

## ಸುವಾರ್ತೆಗೆ ವಿಧೇಯರಾಗುವದರಿಂದ

ತನ್ನ ಸಭೆಯನ್ನು ಸ್ಥಾಪಿಸುವದಕ್ಕೆ ಯೇಸುವಿನ ಯೋಜನೆಯಲ್ಲಿ ಎರಡನೆಯ ಹೆಜ್ಜೆಯು ಸುವಾರ್ತೆಗೆ ವಿಧೇಯರಾಗುವುದಾಗಿದೆ. ಪ್ರಸಂಗಿಸಿದ ಸುವಾರ್ತೆಗೆ ಹಾಜರಿದ್ದ ಜನರು ವಿಧೇಯರಾಗಿರದಿದ್ದರೆ, ಆತನ ಸಭೆಯು ಎಂದೂ ಸ್ಥಾಪಿಸಲ್ಪಡುತ್ತಿರಲಿಲ್ಲ.

ಪೇತ್ರನು ತನ್ನ ಪ್ರಸಂಗದ ಪುರಾವೆಯನ್ನು ಎಲ್ಲಾ ಯಾಥಾರ್ಥವಾದ ಹೃದಯಗಳು ಸ್ವೀಕರಿಸತಕ್ಕ ಒಂದು ನಿರ್ದಿಷ್ಟವಾದ ಮುಕ್ತಾಯಕ್ಕೆ ತಂದಿತು: ಯೇಸುವು "ಕರ್ತನೂ, ಕ್ರಿಸ್ತನೂ ಎರಡೂ ಆಗಿದ್ದಾನೆ" (ಅಪೊಸ್ತಲರ ಕೃತ್ಯಗಳು 2:36). ಆಗ ಕೇಳುತ್ತಿದ್ದ ಜನ ಸಮೂಹವು, "ನಾವೇನು ಮಾಡಬೇಕು?" ಎಂದು ಕೂಗಿತು (ಅಪೊಸ್ತಲರ ಕೃತ್ಯಗಳು 2:37). ಅವರ ಹೃದಯಗಳಿಗೆ "ಅಲಗುನೆಟ್ಟಂತಾಯಿತು," ಇಲ್ಲವೇ ದೇವರ ವಾಕ್ಯದಿಂದ ಮುರಿಯಲ್ಪಟ್ಟವು; ಪ್ರಸಂಗಿಸಲ್ಪಟ್ಟ ವಾಕ್ಯದ ಮುಖಾಂತರ ಪರಿಶುದ್ಧಾತ್ಮನಿಂದ ಅವರು ತಪ್ಪಿದಸ್ಥರೆಂದು ನಿರ್ಣಯಿಸಲ್ಪಟ್ಟರು. ಪ್ರಸಂಗಿಸುವ ತನ್ನ ವಿಧಾನದ ಮುಖಾಂತರ ಪೇತ್ರನು ಅವರ ಅಪರಾಧವನ್ನು ಸೃಷ್ಟಿಸಲಿಲ್ಲ; ಪ್ರಕಟಿಸುವ ವಾಕ್ಯದ ಮುಖಾಂತರ ಆತನು ಅದನ್ನು ಬಹಿರಂಗಪಡಿಸಿದನು, ಅದು, ಸಜೀವವಾದದ್ದು, ಕಾರ್ಯಸಾಧಕ ವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣ ಆತ್ಮಗಳನ್ನೂ ಕೀಲು ಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು, ಹೃದಯದ ಆಲೋಚ ನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ (ಇಬ್ರಿಯ 4:12).

ಒಡೆದ ಮನಸ್ಸಾಕ್ಷಿಯೊಂದಿಗೆ ಮತ್ತು ಮುರಿದ ಹೃದಯಗಳಿಂದ ಕೂಗಿದ ಆ ಯೆಹೂದ್ಯರಿಗೆ, ಪೇತ್ರನು ಈ ಉತ್ತರವನ್ನು ಕೊಟ್ಟನು: "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ, ಆಗ ನೀವು ಪರಿಶುದ್ಧಾ ತ್ಮನ ದಾನವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 2:38). ಕ್ರಿಸ್ತನು ತನ್ನ ಶಿಷ್ಯರಿಗೆ ಕೊಟ್ಟ ತನ್ನ ಕೊನೆಯ ಅಪ್ಪಣೆಯಲ್ಲಿ ಮೂರು ಶರತ್ತುಗಳನ್ನು ಹೇಳಿದನು: ನಂಬಿಕೆ, ಮಾನಸಾಂತರ ಮತ್ತು ಬಾಪ್ತಿಸ್ಮ (ಮಾರ್ಕ 16:15, 16; ಲೂಕ 26:46, 47; ಮತ್ತಾಯ 28:19, 20). ಪೇತ್ರನು ಅವರ ಪ್ರಶ್ನೆಗೆ ತನ್ನ ಉತ್ತರದಲ್ಲಿ ನಂಬಿಕೆಯನ್ನು ನಮೂದಿಸಿರಲಿಲ್ಲ, ಯಾಕಂದರೆ, ನಿರ್ದೇಶನಕ್ಕಾಗಿ ಅವರ ಕೂಗು, ಆ ವಿಶ್ವಾಸವು ಅವರು ಕೇಳಿದ ಪ್ರಸಂಗದಿಂದ ಹುಟ್ಟಿ ಬಂದಿತೆಂಬುದನ್ನು ತೋರಿಸಿತು. ಅವರು ಪೂರೈಸಬೇಕಾದ ಉಳಿದ ಎರಡು ಅಗತ್ಯತೆಗಳು: ಮಾನಸಾಂತರ ಮತ್ತು ಬಾಪ್ತಿಸ್ಮ. ಅವರು ಅಪೇಕ್ಷಿಸಿ, ಕೂಗಿದ ಕ್ಷಮಾಪಣೆಯು ಅವರು ಆ ಅಪ್ಪಣೆಗಳನ್ನು ಕೈಕೊಳ್ಳುವದರ ಮೇಲೆ ಕ್ರಿಸ್ತನ ರಕ್ತದ ಮುಖಾಂತರ ಕೊಡಲ್ಪಡುವುದು. ಆಗ, ರಕ್ಷಿಸಲ್ಪಟ್ಟ ಜನರಂತೆ, ಅವರಿಗೆ ಪರಲೋಕದ ವರವು, ಪರಿಶುದ್ಧಾತ್ಮನು ಕೊಡಲ್ಪಡುವನು.

"ಅವನ ಮಾತಿಗೆ ಒಪ್ಪಿಕೊಂಡವರು ಬಾಪ್ತಿಸ್ಮ ಮಾಡಿಸಿಕೊಂಡರು. ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು" (ಅಪೊಸ್ತಲರ ಕೃತ್ಯಗಳು 2:41) ಎಂದು ಲೂಕನು ದಾಖಲೆ ಮಾಡಿದ್ದಾನೆ. ಅಪೊಸ್ತಲರು ಸಭೆಯಲ್ಲಿ ಅದರ ಅಸ್ತಿವಾರದಂತೆ ಸೇರಿಸಲ್ಪಟ್ಟರು (ಎಫೆಸ 2:20). ಈ ಮೂರು ಸಾವಿರ ಜನರು ಸುವಾರ್ತೆಗೆ

ತಮ್ಮ ವಿಧೇಯತೆಯನ್ನು ಪೂರ್ತಿಗೊಳಿಸಿದಂತೆ, ಅವರು ಯೇಸು ಕ್ರಿಸ್ತನ ಮತ್ತು ಅಪೊಸ್ತಲರ ಅಸ್ತಿವಾರದ ಮೇಲೆ ಆತ್ಮಿಕವಾಗಿ ಒಂದಾಗಿ ಇಡಲ್ಪಟ್ಟರು (1 ಕೊರಿಂಥ 3:11). ಹೀಗೆ, ಸಭೆಯು ಹುಟ್ಟಿತು, ಇಲ್ಲವೇ ಅಸ್ತಿತ್ವದಲ್ಲಿ ತರಲ್ಪಟ್ಟಿತು. ಅಂದಿನಿಂದ ಇಂದಿನವರೆಗೆ, ಯಾವುದೇ ಸಮಯದಲ್ಲಿ ಯಾರಾದರೂ ಅದೇ ಸುವಾರ್ತೆಗೆ ವಿಧೇಯ ರಾದರೆ, ಅವರು ಅದೇ ಸಭೆಗೆ ಕೂಡಿಸಲ್ಪಡುವರು. ಮತ್ತು ಯೇಸುವಿನ ಹಾಗೂ ಅಪೊಸ್ತಲರ ಅಸ್ತಿವಾರದ ಮೇಲೆ ಅವಲಂಭಿಸಿರುವ ಸಭೆಯ ಅತ್ಯುನ್ನತ ರಚನೆಯು ಎತ್ತರವಾಗಿ ಬೆಳೆಯುವದು.

1993 ಮೇ ತಿಂಗಳಿನಲ್ಲಿ, ಉಕ್ರೇನದ ಡೊನೆಟ್‌ಸ್ಕ್‌ದಲ್ಲಿ ಕ್ರಿಸ್ತನಿಗಾಗಿ ಸುವಾರ್ತಾ ಕೂಟದಲ್ಲಿ ಇಪ್ಪತ್ತೈದು ಕ್ರೈಸ್ತರು ಭಾಗವಹಿಸಿದರು. ಆ ಪಟ್ಟಣದಲ್ಲಿ ಕರ್ತನ ಸಭೆಯನ್ನು ಸ್ಥಾಪಿಸುವುದು ನಮ್ಮ ಉದ್ದೇಶವಾಗಿತ್ತು. ವೈಯಕ್ತಿಕ ಬೋಧನೆ, ಟೆಲಿವಿಜನ್ ಪ್ರಸಂಗ ಮತ್ತು ರಾತ್ರಿಯಲ್ಲಿ ಲೆಕ್ಚರ್ ಹಾಲಿನಲ್ಲಿ ಪ್ರಸಂಗಗಳನ್ನು ಉಪಯೋಗಿಸಿದೆವು. ನಮ್ಮ ಪ್ರಸಂಗ ಮತ್ತು ಬೋಧನೆಯಲ್ಲಿ ಪೇತ್ರನು ಪಂಚಾಶತ್ತಮ ದಿನದಂದು ಪ್ರಸಂಗಿಸಿದ ಸುವಾರ್ತೆಯನ್ನು ಪ್ರಸಂಗಿಸಲು ಹುಡುಕಿದೆವು. ಪೇತ್ರನು ಮಾಡಿದಂತೆಯೇ ಜನರನ್ನು ಕ್ರೈಸ್ತರಾಗಲು ಕೇಳಿಕೊಂಡೆವು - ನಂಬಿಕೆಯಿಂದ, ಮಾನಸಾಂತರದಿಂದ, ಮತ್ತು ಬಾಪ್ತಿಸ್ಮದಿಂದ ಬರಬೇಕೆಂದು ಕೇಳಿಕೊಂಡೆವು. ಹತ್ತು ದಿನಗಳ ಸುವಾರ್ತಾಕೂಟದಲ್ಲಿ, 122 ಜನರು ಕ್ರೈಸ್ತರಾಗಲು ತಮ್ಮ ಅಪೇಕ್ಷೆಯನ್ನು ವ್ಯಕ್ತಪಡಿಸಿದರು. ಒಂದು ರಾತ್ರಿ ಮೂವತ್ತೈದು ಜನರು ಮುಂದೆ ಬಂದರು. ಬಾಪ್ತಿಸ್ಮ ಹೊಂದಲು ಬಂದವರಿಗೆ ಅವರು ಒಂದು ಸಭಾಪಂಗಡವನ್ನು ಪ್ರವೇಶಿಸುವದಿಲ್ಲ ಎಂದು ಒತ್ತಿ ಹೇಳಿದೆವು; ಅವರು ಕ್ರಿಸ್ತನ ಸುವಾರ್ತೆಗೆ ತಮ್ಮ ಯಥಾರ್ಥವಾದ ವಿಧೇಯತೆಯ ಮುಖಾಂತರ, ಕರ್ತನಿಂದ ಆತನ ಸಭೆಗೆ, ಪಂಚಾಶತ್ತಮ ದಿನದಂದು ಆತನು ಸ್ಥಾಪಿಸಿದ ಸಭೆಗೆ ಕೂಡಿಸಲ್ಪಡುವರು ಎಂದು ಹೇಳಿದೆವು.

ಕ್ರಿಸ್ತನ ಈ ಹೊಸ ಸಭೆಯು ಒಂದು ಥಿಯೇಟರಿನ ಎರಡನೆಯ ಅಂತಸ್ತನ್ನು ಕೂಟ ನಡಿಸುವ ಸ್ಥಳವಾಗಿ ಬಾಡಿಗೆಗೆ ತೆಗೆದುಕೊಂಡಿತು. ಕೊನೆಯ ಕರ್ತನ ದಿನದಂದು ನಾವು ಅವರೊಂದಿಗೆ ಇದ್ದೆವು, ಬಾಡಿಗೆ ತೆಗೆದುಕೊಂಡ ಕೋಣೆಯು ತುಂಬಿ ಹೊರಸೂಸುತ್ತಿತ್ತು. ನಾವು ಒಂದಾಗಿ ಕೂಡಿ ಕ್ರಿಸ್ತನ ಮರಣದ ಮುಖಾಂತರ ನಮ್ಮ ರಕ್ಷಣೆಯಲ್ಲಿ ಆನಂದಿಸುವ ಕರ್ತನ ಭೋಜನ ಆಚರಿಸಿದೆವು, ಒಟ್ಟಾಗಿ ಹಾಡಿದೆವು, ಒಂದಾಗಿ ಪ್ರಾರ್ಥಿಸಿದೆವು, ನಮ್ಮ ಕಾಣಿಕೆ ಸಮರ್ಪಿಸಿದೆವು ಮತ್ತು ಸುವಾ ರ್ತೆಯು ಪ್ರಸಂಗಿಸುವದನ್ನು ಕೇಳಿದೆವು.

ಹತ್ತು ದಿನಗಳಲ್ಲಿ, ಡೆನೆಟ್‌ಸ್ಕ್‌ದಲ್ಲಿ ಸುವಾರ್ತೆಯನ್ನು ಸಾರುವದರ ಮತ್ತು ಸುವಾರ್ತೆಗೆ ವಿಧೇಯರಾಗುವದರ ಮುಖಾಂತರ ಯಥಾರ್ಥ ಹೃದಯವುಳ್ಳ ಜನರನ್ನು ದೇವರ ರಾಜ್ಯದ ಒಳಗೆ ತರುವದರಿಂದ ಸಭೆಯು ಸ್ಥಾಪಿಸಲ್ಪಟ್ಟಿತು. ಈ 122 ಜನರು ಅಪೊಸ್ತಲರ ಕೃತ್ಯಗಳು 2ರಲ್ಲಿ ದಾಖಲೆಯಾದಂತೆ ಪಂಚಾಶತ್ತಮದಿನದಂದು ನಮ್ಮ ಪ್ರಿಯ ಕರ್ತನು ಸ್ಥಾಪಿಸಿದ ಸಭೆಗೆ ಕೂಡಿಸಲ್ಪಟ್ಟರು.

ಈ ಸುವಾರ್ತಾ ಕೂಟವನ್ನು ಅದರ ಪ್ರಸಂಗ, ಬೋಧನೆ ಮತ್ತು ಕೂಟಗಳಿಂದ ನಾವು ನಡಿಸಿದೆವೆಂದು ತಿಳಿಯಿರಿ. ಆದರೆ ಯಾರೂ ಸುವಾರ್ತೆಗೆ ವಿಧೇಯರಾಗಲಿಲ್ಲ ವೆಂದು ಕಲ್ಪಿಸಿರಿ. ಡೊನೆಟ್‌ಸ್ಕ್‌ದಲ್ಲಿ ಸಭೆಯು ಸ್ಥಾಪಿಸಲ್ಪಡುತ್ತಿತ್ತೋ? ಉತ್ತರವು ಸ್ಪಷ್ಟವಾದ, ಇಲ್ಲ ಎಂದಾಗಿರುತ್ತದೆ ಅಲ್ಲವೇ? ಅದು ಸ್ಥಾಪಿಸಲ್ಪಡುತ್ತಿರಲಿಲ್ಲ. ಹೊಸ ಒಡಂಬಡಿಕೆಯ ಸುವಾರ್ತೆಗೆ ಜನರು ವಿಧೇಯರಾಗದಿದ್ದರೆ, ಒಳ್ಳೆಯ ಉದ್ದೇಶಗಳೂ, ವಿವರವಾದ ಯೋಜನೆಗಳೂ ಮತ್ತು ವೈಯಕ್ತಿಕ ಪ್ರತಿಷ್ಠಿಸುವಿಕೆಯೂ ಇದ್ದರೂ ಸಭೆಯು

ಅಸ್ತಿತ್ವದಲ್ಲಿರಬಾರದು.

ಮೂರು ಸಾವಿರ ಜನರು ಸುವಾರ್ತೆಗೆ ವಿಧೇಯರಾದಾಗ, ದೇವರು ತನ್ನ ಸಭೆಯನ್ನು ಸ್ಥಾಪಿಸಿದನು. ಪೇತ್ರನು ಪ್ರಸಂಗಿಸಿದ ಸುವಾರ್ತೆಯನ್ನು ಪ್ರಸಂಗಿಸುವದರ ಮುಖಾಂತರ ಹಾಗೂ ಅದೇ ಸುವಾರ್ತೆಗೆ ಜನರ ವಿಧೇಯತೆಯ ಮುಖಾಂತರ ಇಂದು ಸಭೆಯು ಅಸ್ತಿತ್ವದಲ್ಲಿರದ ಯಾವುದೇ ಸ್ಥಳದಲ್ಲಿ ಸಭೆಯು ಸ್ಥಾಪಿಸಲ್ಪಡಬಹುದು. ಪ್ರಾರಂಭದಲ್ಲಿ ಕ್ರಿಸ್ತನು ಈ ರೀತಿಯಲ್ಲಿ ತನ್ನ ಸಭೆಯನ್ನು ಸ್ಥಾಪಿಸಿದನು ಮತ್ತು ಇಂದು ಅದು ಸ್ಥಾಪಿಸಲ್ಪಡುವುದಕ್ಕೆ ಇದೊಂದೇ ಮಾರ್ಗವಿರುವುದು.

## ಸುವಾರ್ತೆಯನ್ನು ಜೀವಿಸುವದರಿಂದ

ತನ್ನ ಸಭೆಯನ್ನು ಸ್ಥಾಪಿಸುವ ಯೇಸುವಿನ ಯೋಜನೆಯಲ್ಲಿ ಮೂರನೆಯ ಹೆಜ್ಜೆಯು ಸುವಾರ್ತೆಯನ್ನು ಜೀವಿಸುವುದು ಎಂದು ಕರೆಯಲ್ಪಡಬಹುದು. ಸುವಾರ್ತೆಗೆ ವಿಧೇಯರಾದ ಜನರು ಅದನ್ನು ಅನುದಿನವೂ ಜೀವಿಸಿದರು; ಹೀಗೆ, ಕ್ರಿಸ್ತನ ಸಭೆಯು ಜೀವದಿಂದ ತುಂಬಿ ತುಳುಕಿತು.

ಕ್ರೈಸ್ತರಾದವರ ಬಗ್ಗೆ ಲೂಕನು ಹೀಗೆ ಹೇಳಿದನು, "ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು" (ಅಪೊಸ್ತಲರ ಕೃತ್ಯಗಳು 2:42). ಅವರು ಕ್ರಿಸ್ತನ ಸಭೆಯಾದದ್ದು ಅಲ್ಲದೇ, ಆ ದಿನದಿಂದ ಅವರು ಕ್ರಿಸ್ತನ ಸಭೆಯಂತೆ ಜೀವಿಸಿದರು.

ಈ ಪ್ರಾರಂಭದ ಕ್ರೈಸ್ತರ ಜೀವಿತಗಳು ಸುವಾರ್ತೆಯನ್ನು ಜೀವಿಸುವುದಕ್ಕೆ ಸಮರ್ಪಣೆಯು ಬೇಕೆಂಬುದನ್ನು ಉದಾಹರಿಸುತ್ತವೆ. ಅವರು ಅಪೊಸ್ತಲರ ಬೋಧನೆಗೆ, ಅನ್ಯೋನ್ಯತೆಗೆ ರೊಟ್ಟಿ ಮುರಿಯುವದಕ್ಕೆ ಮತ್ತು ಪ್ರಾರ್ಥನೆಗೆ ತಮ್ಮನ್ನು ಒಪ್ಪಿಸಿಕೊಟ್ಟಿದ್ದರು. ಅವರು ಪ್ರಾರಂಭಿಸಿ ಆ ಮೇಲೆ ಬೇಗನೇ ಬಿದ್ದುಹೋಗಲಿಲ್ಲ; ಅವರು ಪ್ರಾರಂಭಿಸಿದರು ಮತ್ತು ದೇವರ ಸತ್ಯಕ್ಕೆ ಸ್ಥಿರವಾಗಿ ಒಪ್ಪಿಸಿಕೊಟ್ಟಿದ್ದರು. ಅವರು ದೇವರನ್ನು ಕ್ರಮವಾಗಿ ಆರಾಧಿಸಿದರು; ಆರಾಧನೆಯು ಅವರಿಗೆ ಜೀವನದ ಮಾರ್ಗವಾಯಿತು. ಕ್ರೈಸ್ತನಾಗುವುದು ಹೊಸ ಮಾರ್ಗಕ್ಕೆ ತಿರುಗಿಕೊಂಡು ತಮ್ಮ ಉಳಿದ ಜೀವಿತದಲ್ಲಿ ಅವರು ನಡೆದು ಹೋಗುವಂತೆ ಇತ್ತು.

ಸುವಾರ್ತೆಯನ್ನು ಜೀವಿಸುವುದು ಅವರಿಂದ ಕನಿಕರವನ್ನು ಕೇಳಿತು. "ತಮ್ಮ ತಮ್ಮ ಚರಸ್ಥಿರ ಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿಕೊಡುತ್ತಾ ಇದ್ದರು" (ಅಪೊಸ್ತಲರ ಕೃತ್ಯಗಳು 2:45) ಎಂದು ಲೂಕನು ಹೇಳುತ್ತಾನೆ. "ನೀನು ನನಗೆ ಸಹಾಯ ಮಾಡುವಿಯೋ?" ಎಂದು ಅವರು ಇತರರಿಗೆ ಕೇಳಲಿಲ್ಲ. ಅವರ ಮಧ್ಯದಲ್ಲಿ ಕೊರತೆಯಲ್ಲಿ ಇರುವವರಿಗೆ "ನಾನು ನಿನಗೆ ಸಹಾಯ ಮಾಡಲೋ?" ಎಂದು ಕೇಳಿದರು. ಕನಿಕರವುಳ್ಳ ಕ್ರಿಸ್ತನು ಅವರಲ್ಲಿದ್ದನು, ಮತ್ತು ಆ ಕನಿಕರವು ಅವರ ಧ್ಯೇಯಗಳಲ್ಲಿ ಮತ್ತು ಕೃತ್ಯಗಳಲ್ಲಿ ವ್ಯಕ್ತಪಡಿಸಲ್ಪಟ್ಟವು.

ಪ್ರಥಮ ಕ್ರೈಸ್ತರು ಸುವಾರ್ತೆಯನ್ನು ಅದರ ಅನ್ಯೋನ್ಯತೆಯನ್ನು ಕೈಗೊಳ್ಳುವದರಿಂದಲೂ ಜೀವಿಸಿದರು. "ನಂಬಿದವರೆಲ್ಲರೂ ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತಾ ಇದ್ದರು" (ಅಪೊಸ್ತಲರ ಕೃತ್ಯಗಳು 2:44) ಎಂದು ಲೂಕನು ಬರೆದಿದ್ದಾನೆ. ಅನಂತರದಲ್ಲಿ "ನಂಬಿದ್ದ ಮಂಡಲಿಯವರ ಹೃದಯವೂ ಪ್ರಾಣವೂ ಒಂದೇ ಆಗಿತ್ತು ..." (ಅಪೊಸ್ತಲರ ಕೃತ್ಯಗಳು 4:32) ಎಂದು ಕೂಡಿಸಿದನು.

ಅವರು ಸುವಾರ್ತೆಗೆ ವಿಧೇಯರಾದಾಗ ದೇವರ ಆತ್ಮನಿಂದ ಆತ್ಮಿಕ ಐಕ್ಯತೆಯಲ್ಲಿ ಒಂದಾಗಿ ಕೂಡಿಸಲ್ಪಟ್ಟಿದ್ದರು, ಮತ್ತು ಅವರು ಆ ಐಕ್ಯತೆಯನ್ನು ಪರಿಶುದ್ಧಾತ್ಮನ ಸಂದೇಶಕ್ಕೆ ನಿಷ್ಠೆಯಿಂದಲೂ, ನಿಷ್ಕಪಟವಾದ ಸ್ವಾರ್ಥರಹಿತತೆಯಿಂದಲೂ ಮತ್ತು ಒಬ್ಬರೊಬ್ಬರಿಗಾಗಿ ಯಥಾರ್ಥವಾದ ಚಿಂತನೆಯಿಂದಲೂ ಕಾಯ್ದುಕೊಳ್ಳುತ್ತಿದ್ದರು.

ಕ್ರಿಸ್ತನ ಸಭೆಯು ಜನರು ಸುವಾರ್ತೆಗೆ ವಿಧೇಯರಾಗಲು ಮನಸ್ಸು ಮಾಡುವಲ್ಲಿ, ಅದಕ್ಕೆ ವಿಧೇಯರಾಗುವಲ್ಲಿ, ಮತ್ತು ಅದನ್ನು ಜೀವಿಸುವಲ್ಲಿ ಅಸ್ತಿತ್ವದಲ್ಲಿರಬಹುದು. ವರ್ಷಗಳ ಹಿಂದೆ ಹಾರ್ಡಿಂಗ್ ಕಾಲೇಜಿನಲ್ಲಿ ನಾನು ಅಧ್ಯಯನ ಮಾಡುತ್ತಿದ್ದಾಗ, ಕೆಲವು ಸಲ ಆರ್ಕಾನ್ಸಾಸದ, ಸ್ಪ್ರಿಂಗ್‌ಫೀಲ್ಡ್‌ಗೆ, ಹೋಗಿ ಪ್ರಸಂಗಿಸುತ್ತಿದ್ದೆನು. ಅಲ್ಲಿದ್ದ ಸಭೆಯು ಚಿಕ್ಕದಾಗಿತ್ತು, ಆದರೆ ಗಾತ್ರದಲ್ಲಿ ಕೊರತೆಯಾದದ್ದು, ಆತ್ಮದಲ್ಲಿ ತುಂಬಿಕೊಳ್ಳ ಲ್ಪಟ್ಟಿತ್ತು. ಈ ಸಭೆಯು ಸುಮಾರು ಹನ್ನೆರಡು ಜನ ಮಹಿಳೆಯರ ಸದಸ್ಯತ್ವ ಹೊಂದಿತ್ತು - ಸಭೆಯಲ್ಲಿ ಪುರುಷರಿಲ್ಲದ್ದರಿಂದ, ಮಹಿಳೆಯರು ತಾವೇ ಎಲ್ಲಾ ಕೆಲಸವನ್ನು ಮಾಡ ಬೇಕಾಗಿತ್ತು. ನನ್ನ ಜೊತೆಗಿದ್ದ, ಟೆರ್ರಿ ಸೀಮಾನ್‌ನು ನನ್ನೊಂದಿಗೆ ಅಲ್ಲಿಗೆ ಬರುತ್ತಿದ್ದನು, ಮತ್ತು ನಾವು ಇಡೀ ಆರಾಧನೆಯನ್ನು ನಡಿಸುತ್ತಿದ್ದೆವು. ನಾನು ಪ್ರಸಂಗಿಸಿದಾಗ, ಟೆರ್ರಿಯು ಹಾಡುವದನ್ನು, ಪ್ರಾರ್ಥಿಸುವದನ್ನು, ಮತ್ತು ಕರ್ತನ ಭೋಜನದಲ್ಲಿ ಸಹಾಯ ಮಾಡುವದನ್ನು ಕೈಕೊಳ್ಳುತ್ತಿದ್ದನು. ಟೆರ್ರಿಯು ಪ್ರಸಂಗಿಸಿದಾಗ ಆರಾಧನೆಯ ಉಳಿದ ಭಾಗವನ್ನು ನಾನು ನಡೆಸುತ್ತಿದ್ದೆನು.

ಈ ಮಹಿಳೆಯರು ಕಠಿಣವಾದ ಪರಿಸ್ಥಿತಿಯಲ್ಲಿ ಇದ್ದರು. ಅವರಿಗೆ ಸಹಾಯ ಮಾಡಲು ಯಾರೂ ಇರಲಿಲ್ಲ, ಆದರೆ ಅವರು ಕ್ರಿಸ್ತನ ಸಭೆಯಾಗಿ ಸ್ಥಿರತೆಯಿಂದ ಮುಂದುವರಿಸಿದರು. ಅವರಿಗೆ ಪ್ರಸಂಗಿಯು ಇರದೇ ಹೋದಾಗ, ಬುಧವಾರ ರಾತ್ರಿಗಳಲ್ಲಿ ವಿಶೇಷವಾಗಿ ಪ್ರಸಂಗಿಸಲು ಇಲ್ಲದೇ ಇರುವಾಗ, ಅವರು ಕ್ರೈಸ್ತ ಮಹಿಳೆಯರ ಗುಂಪಾಗಿ ಹಾಡುತ್ತಿದ್ದರು, ಪ್ರಾರ್ಥಿಸುತ್ತಿದ್ದರು ಮತ್ತು ಬೈಬಲನ್ನು ಅಧ್ಯಯನ ಮಾಡುತ್ತಿದ್ದರು. ಅವರ ಪರಿಸ್ಥಿತಿಗಳು ಆದರ್ಶವಾದವುಗಳಾಗಿರದಿದ್ದರೂ, ಅವರು ಸುವಾರ್ತೆಯನ್ನು ಜೀವಿ ಸುವದನ್ನು ಮುಂದುವರಿಸಿದರು.

ನೀವು ಆರ್ಕಾನ್ಸಾಸದ ಸ್ಪ್ರಿಂಗ್‌ಫೀಲ್ಡ್‌ನ್ನು ಎಂದಾದರೂ ಸಂದರ್ಶಿಸಿದರೆ, ಚರ್ಚ್ ಆಫ್ ಕ್ರೈಸ್ಟ್ ಇನ್ನೂ ಕೂಡಿಬರುತ್ತ, ಸೇವೆ ಮಾಡುತ್ತಿರುವದನ್ನು ಕಂಡುಕೊಳ್ಳುವಿರಿ. ಸಭೆಯು ಬಲವುಳ್ಳದ್ದೂ ಚಟುವಟಿಕೆಯುಳ್ಳದ್ದೂ ಆಗಿರುವದನ್ನು ಕಂಡುಕೊಳ್ಳುವಿರಿ. ಅದು ಇನ್ನೂ ಬಹಳ ದೊಡ್ಡದಾಗಿರುವದಿಲ್ಲ. ಆದರೆ ಅದು ನಂಬಿಗಸ್ತಿಕೆಯುಳ್ಳದ್ದೂ ದೃಢವಾದದ್ದೂ ಆಗಿರುವುದು. ತಮ್ಮ ಕಠಿಣವಾದ ಪರಿಸ್ಥಿತಿಯಲಿದ್ದೂ ಈ ನಂಬಿಗಸ್ತ ಮಹಿಳೆಯರು ಅನುದಿನವೂ ಸವಾರ್ತೆಯನ್ನು ಜೀವಿಸದಿದ್ದರೆ, ಸ್ಪ್ರಿಂಗ್‌ಫೀಲ್ಡ್‌ದಲ್ಲಿಯ ಸಭೆಯು ಅಸ್ತಿತ್ವದಲ್ಲಿ ಉಳಿಯುತ್ತಿರಲೇ ಇಲ್ಲ. ಒಂದು ಸಮಾಜದಲ್ಲಿ ಸಭೆಯು ಜೀವಿ ಸಬೇಕಾದರೆ ಅದೇನು ತೆಗೆದುಕೊಂಡಿತು ಎಂಬುದನ್ನು ಅವರು ತಿಳಿದಿದ್ದರು.

ಹಲವಾರು ಜನರು ಬಾಪ್ತಿಸ್ಮ ಹೊಂದಿದ ಸುವಾರ್ತಾ ಕೂಟಗಳ ಬಗ್ಗೆ ನಾವು ಕೇಳಿ ದ್ದೇವೆ. ಅವರು ದೇವರ ಆತ್ಮನಿಂದ ದೇವರ ರಾಜ್ಯದಲ್ಲಿ ಜನಿಸಿದರು ಮತ್ತು ಕ್ರಿಸ್ತನ ಸಭೆಯು ಕೂಡಿಬರಲು ಪ್ರಾರಂಭಿಸಿತು. ಆ ಸ್ಥಳದಲ್ಲಿ ಸಭೆಯು ಸ್ಥಾಪಿಸಲ್ಪಟ್ಟಿತೋ ಎಂಬಂತೆ ತೋರಿತು. ಸುವಾರ್ತಾಕೂಟವು ಮುಗಿದಾಗ ಮತ್ತು ಸುವಾರ್ತಾಕೂಟ ನಡಿಸಿದವರು ಹೊರಟು ಹೋದಾಗ, ಹೊಸ ಕ್ರೈಸ್ತರು ನಿರಾಶರಾದರು. ಬೇಗನೇ ಆರಾಧನೆಗಳಲ್ಲಿ ಭಾಗವಹಿಸುವವರ ಸಂಖ್ಯೆ ಬಿದ್ದು ಹೋಯಿತು ಮತ್ತು ಅಂತಿಮವಾಗಿ ಸಭೆಯು ಕೂಡಿ ಬರುವುದು ನಿಂತುಹೋಯಿತು. ಪ್ರತಿಯೊಬ್ಬರು ಸುವಾರ್ತೆಯನ್ನು ಜೀವಿ ಸುವದನ್ನು ಬಿಟ್ಟು ಬಿಟ್ಟರು, ಮತ್ತು ಆ ಸ್ಥಳದಲ್ಲಿ ಅಸ್ತಿತ್ವದಲ್ಲಿ ಇಲ್ಲದೇ ಹೋಯಿತು. ಕ್ರಿಸ್ತನ

ಸಭೆಯು ಸುವಾರ್ತೆಯು ಜೀವಿಸಲ್ಪಡದೇ ಇರುವಲ್ಲಿ ಸುಮ್ಮನೇ ಉಳಿದುಕೊಳ್ಳುವದಿಲ್ಲ.

ಸುವಾರ್ತೆಯನ್ನು ಜೀವಿಸಿದ ಜನರ ಮುಖಾಂತರ ಪಂಚಾಶತ್ತಮದ ದಿನದಂದು ಕ್ರಿಸ್ತನು ತನ್ನ ಸಭೆಯನ್ನು ಸ್ಥಾಪಿಸಿದನು, ಮತ್ತು ಆತನ ಸಭೆಯು ಅದೇ ರೀತಿಯಲ್ಲಿ ಇಂದು ಸಭೆಯು ಅಸ್ತಿತ್ವದಲ್ಲಿ ಇರದೇ ಇರುವಲ್ಲಿ ಆತನ ಸಭೆಯು ಸ್ಥಾಪಿಸಲ್ಪಟ್ಟಿತು. ಈ ನಿಯಮಕ್ಕೆ ಅಪವಾದಗಳಿರುವದಿಲ್ಲ. ಸಭೆಯು ನಮ್ಮ ಸಮಾಜದಲ್ಲಿ ಜೀವಿಸಬೇಕಿದ್ದರೆ, ನಾವು ಸುವಾರ್ತೆಗೆ ವಿಧೇಯರಾಗಬೇಕು ಮತ್ತು ಅದನ್ನು ಜೀವಿಸಬೇಕು.

## ಮುಕ್ತಾಯ

ಹಾಗಾದರೆ, ಕ್ರಿಸ್ತನು ತನ್ನ ಸಭೆಯನ್ನು ಹೇಗೆ ಸ್ಥಾಪಿಸಿದನು? ಆತನು ಅದನ್ನು ಸುವಾರ್ತೆಯು ಸಾರಲ್ಪಡುವದರ, ವಿಧೇಯರಾಗಲ್ಪಡುವದರ, ಮತ್ತು ಜೀವಿ ಸಲ್ಪಡುವದರ ಮುಖಾಂತರ ಮಾಡಿದನು. ನಮಗಾಗಿ ಅನ್ವಯವು ಸ್ಪಷ್ಟವಾಗಿದೆ: ಅದೇ ರೀತಿಯಲ್ಲಿ ಸಭೆಯು ಇಂದು ಸ್ಥಾಪಿಸಲ್ಪಟ್ಟಿದೆ. ಅದೇ ಸುವಾರ್ತೆಯಲ್ಲಿ ಸಾರಲ್ಪಡುವದರಲ್ಲಿ ಅದೇ ಸುವಾರ್ತೆಗೆ ವಿಧೇಯರಾಗುವಲ್ಲಿ, ಮತ್ತು ಅದೇ ಸುವಾರ್ತೆಯು ಜೀವಿಸಲ್ಪಡುವಲ್ಲಿ, ಪಂಚಾಶತ್ತಮ ದಿನದಂದು ಕ್ರಿಸ್ತನು ಸ್ಥಾಪಿಸಿದ ಅದೇ ಸಭೆಯು ಸ್ಥಾಪಿಸಲ್ಪಟ್ಟಿತು ಮತ್ತು ಜೀವಿಸುತ್ತಿರುವುದು.

ಹೊಸ ಒಡಂಬಡಿಕೆಯ ಸುವಾರ್ತೆಗೆ ವಿಧೇಯರಾಗಿರಿ, ಅನುದಿನವೂ ಅದನ್ನು ಜೀವಿಸಿರಿ, ಮತ್ತು ನೀವು ಕ್ರಿಸ್ತನ ಸಭೆಯಾಗುವಿರಿ.

ಮದುವೆಯ ಒಂದು ಪ್ರಸಂಗವನ್ನು ಮಾಡುತ್ತಿದ್ದ ಒಬ್ಬ ಪ್ರಸಂಗಿಯ ಬಗ್ಗೆ ಒಂದು ಕಥೆಯು ಹೇಳಲ್ಪಟ್ಟಿದೆ. ಅವನು ಈ ವಿಚಾರವನ್ನು ಒತ್ತಿ ಹೇಳುತ್ತಿದ್ದನು: “ನೀವು ದೇವರ ಯೋಜನೆಯನ್ನು ತಿಳಿದಿರುವಿರಿ: ಒಬ್ಬ ಸ್ತ್ರೀಗೆ ಒಬ್ಬ ಪುರುಷನಿರುವನು ಮತ್ತು ಒಬ್ಬ ಪುರುಷನಿಗೆ ಒಬ್ಬ ಸ್ತ್ರೀ ಇರುವಳು. ಅದು ಆತನ ಯೋಜನೆ ಅದರ ಮೇಲೆ ನೀವು ಸುಧಾರಿಸಲಾರಿರಿ.” ಸುಮಾರು ಒಂದು ತಾಸಿನವರೆಗೆ ಇದೇ ಅಂಶವನ್ನು ಮೇಲಿಂದ ಮೇಲೆ ಹೇಳುತ್ತಾ ಹೋದನು. ಆರಾಧನೆಯು ಮುಗಿದಾಗ ಮತ್ತು ಬಾಗಿಲ ಬಳಿಯಲ್ಲಿ ಪ್ರತಿಯೊಬ್ಬ ಆರಾಧಕನನ್ನು ವಂದಿಸುತ್ತಿದ್ದಾಗ, ಅವನು ಇಬ್ಬರು ಯುವತಿಯರನ್ನು ಸಂದರ್ಶಿಸಿದನು. ಮದುವೆಗಾಗಿ ಅವಕಾಶಗಳು ಈ ಮಹಿಳೆಯರಿಂದ ದಾಟಿ ಹೋಗು ವುದು ಸ್ಪಷ್ಟವಾಗಿತ್ತು. “ಪ್ರಸಂಗಿಯೇ, ಅದರ ಮೇಲೆ ನಾವು ಸುಧಾರಿಸಲು ನಾವು ಬಯಸುವದಿಲ್ಲ. ನಾವು ಅದರೊಳಗೆ ಸೇರುವದನ್ನು ಮಾತ್ರ ಬಯಸುತ್ತೇವೆ” ಎಂದು ಅವರು ಹೇಳಿದರು!

ಕ್ರಿಸ್ತನ ಸಭೆಯ ಬಗ್ಗೆ ನಿಮ್ಮ ಮನೋಭಾವನೆಗಳು ಇವಾಗಿರುವವಲ್ಲವೇ? ಅದರ ಮೇಲೆ ನೀವು ಸುಧಾರಣೆ ಮಾಡಲಾರಿರಿ. ನೀನು ನಿನ್ನನ್ನು ತಿಳಿದುಕೊಂಡಿರುವದಕ್ಕಿಂತ ಹೆಚ್ಚು ಉತ್ತಮವಾಗಿ ಆತನು ನಿನ್ನನ್ನು ತಿಳಿದುಕೊಂಡಿರುವನು. ಆತನು ತನ್ನ ಸಭೆಯನ್ನು ನಿನ್ನ ಅಗತ್ಯತೆಗಳಿಗಾಗಿ ರೂಪಿಸಿರುವನು. ಕ್ರಿಸ್ತನ ಸಭೆಯಲ್ಲಿ ಮಾಡುವ ಯಾವುದೇ ಬದಲಾವಣೆಯು ಅದರ ದೈವಿಕ ಪರಿಪೂರ್ಣತೆಯನ್ನು ತೆಗೆದು ಹಾಕುವುದು ಮತ್ತು ಮಾನವ ಬಲಹೀನತೆಯಿಂದ ಬದಲಾಗಿಡಲ್ಪಡುವುದು.

ಕ್ರಿಸ್ತನಿಗಿರುವಂತೆಯೇ ಆತನನ್ನು ತೆಗೆದು ಕೊಳ್ಳಿರಿ ಮತ್ತು ಆತನ ಸುವಾರ್ತೆಗೆ ವಿಧೇಯರಾಗುವದರಿಂದ ಮತ್ತು ಜೀವಿಸುವುದರಿಂದ, ಆತನು ಕಟ್ಟಿದಂಥ ಸಭೆಯೇ ಆಗಿರಿ.

© 2009 Truth for Today